**ಓ.ಎಸ್ ನಂ.97 /2022** **ಪಿ.ಡಬ್ಲ್ಯೂ-1**

**ಸಾಕ್ಷಿಯನ್ನು ದಿನಾಂಕ 19.12.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 1 ರಿಂದ 5 ಮತ್ತು 8 ನೇ ಪ್ರತಿವಾದಿ ಪರ ಶ್ರೀಮತಿ ಎನ್.ಎಸ್ ವಕೀಲರಿಂದಃ**

1 ನೇ ಪ್ರತಿವಾದಿಯು ಕುಟುಂಬದ ಅವಶ್ಯಕತೆ ಗೋಸ್ಕರ ನನ್ನ ಬಳಿ ಸಾಲ ಕೇಳಿದ್ದರು ಎಂದರೆ ಸರಿಯಲ್ಲ. ಸಾಲದ ಭದ್ರತೆಗಾಗಿ ಜಮೀನನ್ನು ಆಧಾರ ಮಾಡಿಕೊಡಬೇಕೆಂದು ಕೇಳಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಆಧಾರ ಪತ್ರ ಬರೆದುಕೊಡಲು ನೋಂದಣಿ ಕಚೇರಿಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಆಧಾರ ಪತ್ರ ಎಂದು ಪ್ರತಿವಾದಿಯರಿಗೆ ನಂಬಿಸಿ ಅವರಿಗೆ ಮೋಸ ಮಾಡಿ ಕರಾರು ಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 2ರ ಒಕ್ಕಣೆಯನ್ನು ನಾನೇ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಕರಾರು ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುತ್ತದೆ. ನಾನು ದಾವಾ ಆಸ್ತಿಯ ಕಂದಾಯ ದಾಖಲೆಗಳನ್ನು ನೋಡಿರುತ್ತೇನೆ. ದಾವಾ ಆಸ್ತಿಯ ಪಹಣಿಯು ಪ್ರತಿವಾದಿಗಳ ಹೆಸರಿನಲ್ಲಿ ಜಂಟಿಯಾಗಿರುತ್ತದೆ. ನಿಪಿ 11 ರಲ್ಲಿ ನಮೂದು ಇರುವ ಮಹದೇವಮ್ಮ ಬಿನ್ ಚನ್ನನಾಯಕ ಅವರನ್ನು ನಿಪಿ 2ರಲ್ಲಿ ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ಮತ್ತು ಅವರ ಸಹಿ ಇರುವುದಿಲ್ಲ ಎಂದರೆ ಸಾಕ್ಷಿದಾರರು ಅವರು ತೀರಿಕೊಂಡಿರುತ್ತಾರೆ ಎನ್ನುವರು. ಅವರು ತೀರಿಕೊಂಡಿರುವ ಬಗ್ಗೆ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ನಾನು ಮೋಸದಿಂದ ಪ್ರತಿವಾದಿಯರ ಬಳಿ ಆಧಾರ ಪತ್ರ ಎಂದು ಕರಾರು ಪತ್ರ ಬರೆಸಿಕೊಂಡಿರುವುದರಿಂದ ಸದರಿ ಮಹದೇವಮ್ಮ ಅವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಸದರಿ ಮಹದೇವಮ್ಮ ಕಾಣೆಯಾಗಿರುತ್ತಾರೆಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮಹದೇವಮ್ಮ ಅವರು ಕಾಣೆಯಾಗಿರುವ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಮಹದೇವಮ್ಮ ಅವರಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ ಎಂದರೆ ಸರಿ. ಅವರ ಮಕ್ಕಳನ್ನು ನಿಪಿ 2 ರಲ್ಲಿ ಹಾಗೂ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಮತ್ತು ನಿಪಿ 2 ರಲ್ಲಿ ಅವರು ಸಹಿ ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ನಿಪಿ 2 ರಲ್ಲಿ ಸಹಿ ಮಾಡಿರುತ್ತಾರೆ ಎನ್ನುವರು. ನಿಪಿ 2 ರಲ್ಲಿ ಸಾಕ್ಷಿಗಾರರಾಗಿ ಸಹಿ ಮಾಡಿರುವ ಸೋಮನಾಯಕ ಸದರಿ ಮಹದೇವಮ್ಮ ಅವರ ಗಂಡನಾಗಿರುತ್ತಾನೆ. ಅವರಿಗೆ ನಾನು ನಿಪಿ 2 ದಾಖಲೆಯನ್ನು ಮಾಡಿಸಿಕೊಂಡಾಗ ರೂ. 20,000/- ಹಣ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅವರಿಗೆ ಹಣ ನೀಡಿದ್ದರಿಂದ ಅವರು ನಿಪಿ 2 ಕ್ಕೆ ಸಹಿ ಮಾಡಿ ನ್ಯಾಯಾಲಯದಲ್ಲಿ ನನ್ನ ಪರವಾಗಿ ಸುಳ್ಳು ಸಾಕ್ಷಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಹೆಗ್ಗಡಹಳ್ಳಿಯಲ್ಲಿ ಪ್ರತಿ ಎಕರೆಗೆ 30 ಲಕ್ಷ ರೂಪಾಯಿ

ಮಾರುಕಟ್ಟೆ ಮೌಲ್ಯ ಇರುತ್ತದೆ ಎಂದರೆ  ಸರಿಯಲ್ಲ. ದಾವಾ ಆಸ್ತಿಯ ಮೌಲ್ಯ 50 ರಿಂದ 60 ಲಕ್ಷ ರೂಪಾಯಿ ಆಗಿದ್ದು ಅಷ್ಟು ಮೌಲ್ಯದ ಆಸ್ತಿಯನ್ನು ಪ್ರತಿವಾದಿಯರು ನನಗೆ ಮಾರಾಟ ಮಾಡಲು ಒಪ್ಪಿರುವುದಿಲ್ಲ, 5 ಲಕ್ಷ ರೂಪಾಯಿಗೆ ಆಸ್ತಿಯನ್ನು ಆಧಾರ ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.